# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 18.12.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-18-12-2021 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖಾವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| ೦೨ | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಎನ್.ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಜಿಜಗದೀಶ್ ಎ.ಎಸ್.ಐ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆ | 8867733318 |
| ೦೬ | ಶ್ರೀ.ಹೋಲಿಯಪ್ಪ ಮಾರ್ಷಲ್ | 8904349926 |
| ೦೭ | ಶ್ರೀ.ಬಿ.ಜಗದೀಶ್ ಎ.ಎಸ್.ಐ ಮಡಿವಾಳ ಪೊಲೀಸ್ ಠಾಣೆ | 8867733308 |
| ೦೮ | ಶ್ರೀ.ಕೆ ವೆಂಕಟೇಶ್ ಎ.ಎಸ್.ಐ ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್ | 9886339044 |
| ೦೯ | ಶ್ರೀಮತಿ.ಆಶಾ ಸ.ಅ ಬೆಸ್ಕಾಂ | 9900724229 |
| ೧೦ | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| ೧೧ | ಶ್ರೀ ಸೈಯದ್ ನಸರುದ್ದೀನ್ ಸದಸ್ಯರು | 9741518897 |
| ೧೨ | ಶ್ರೀ.ಬಿ.ವಿಶ್ವಕುಮಾರ್ ಸದಸ್ಯರು | 9845371963 |
| ೧೩ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| ೧೪ | ಶ್ರೀ ರಮೇಶ್ ಸದಸ್ಯರು | 9731108622 |
| ೧೫ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾ.ನಿ | 9980225272 |
| ೧೬ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೭ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9886339044 |
| ೧೮ | ಶ್ರೀಮತಿ.ಸ್ವಾಮಿಗೌಡ ಪರಿವೀಕ್ಷಕರು ತೋಟಗಾರಿಕೆ ಇಲಾಖೆ ದಕ್ಷಿಣ | 9945378526 |
| ೧೯ | ಶ್ರೀ ಮಂಜೂನಾಥ ಪಿ. ಮೇಲ್ವಿಚಾರಕರು ಘ.ತ್ಯಾ.ನಿ | 9740903427 |
| ೨೦ | ಶ್ರೀ ರಮಜಾನ್ ಸಾಬ್ ಎ.ಎಸ್.ಐ ಮಡಿವಾಳ ಪೊಲೀಸ್ ಠಾಣೆ | 7022251797 |
| ೨೧ | ಶ್ರೀ.ವಿ.ಗೀರಿಶ್ | 8951596617 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೇಯದಾಗಿ ಕಳೆದ ಸಭೆಯಲ್ಲಿ ಪ್ರಸ್ತಾಪವಾಗಿದ್ದ ಬಾಲಾಜಿನಗರ 6ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೊಲ್ ಕುಸಿದು ಗುಂಡಿಯಾಗಿ ಪರಿವರ್ತನೆಯಾಗಿದ್ದ ಇದನ್ನು ಬೆಂಗಳೂರು ನೀರು ಸರಬರಾಜು ಮಂಡಳಿವತಿಯಿಂದ ದುರಸ್ಥಿಪಡಿಸಲಾಗಿರುತ್ತದೆ ಎಂದು ಸಭೆಗೆ ಹಾಜರಿದ್ದ ಬಿ.ಡಬ್ಲೂ.ಎಸ್.ಎಸ್.ಬಿ ಕೆಲಸ ಪರಿವಿಕ್ಷರಾದ ಶ್ರೀ ಕೃಷ್ಣ.ಸಿ ರವರು ಸಭೆಗೆ ತಿಳಿಸಿದರು.

2) ಸಭೆಗೆ ಹಾಜರಿದ್ದ ಶ್ರೀ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿನ ಸಣ್ಣ ವ್ಯಾಪಾರಿಗಳು, ಬೀದಿ ವ್ಯಾಪಾರಿಗಳು, ಮತ್ತು ಅಂಗಡಿ ಮಳಿಗೆ, ಹೋಟಲ್‌ಗಳಲ್ಲಿ ಪ್ಲಾಸ್ಟೀಕ್ ಬ್ಯಾಗ್‌ಗಳನ್ನು ನಿಷೇದಿಸಿದ್ದರೂ ಸಹ ಪ್ಲಾಸ್ಟೀಕ್ ಬ್ಯಾಗ್‌ಗಳನ್ನು ಉಪಯೋಗಿಸಿಕೊಂಡು ವ್ಯಾಪಾರಮಾಡುತ್ತಿರುವುದು ಕಂಡುಬಂದಿರುತ್ತದೆ. ಇದರ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವುದು ಬಹಳ ವಿಷಾದಕರ ಸಂಗತಿಯಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಶ್ರೀ ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ಕೂಡಲೇ ಪರಿಶೀಲಿಸಿ, ಅಂತಹ ವ್ಯಾಪಾರಿಗಳನ್ನು ಗುರುತಿಸಿ ದಂಡವಿಧಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

3) ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆಯ ಹೊಸ ರೂಪಾಂತರಿ ತಳಿ ಓಮಿಕ್ರಾನ್ ರೋಗ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೇಕು ಹಾಗೂ ಮಾಸ್ಕ್ ಧರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

4) ಶ್ರೀ ಬಿ.ಟಿ ಕೃಷ್ಣಮೂರ್ತಿ ಮತ್ತು ಲೋಕೇಶ್‌ರವರು ಮಾತನಾಡಿ, ಗುಡ್‌ಅರ್ಥ್ ಸ್ಕೂಲ್, ಆರ್ಚ ರಸ್ತೆಗಳಲ್ಲಿನ ಬೀದಿ ದೀಪಗಳ ಫಿಟಿಂಗ್ಸ್ ಇರುವುದಿಲ್ಲ ಮತ್ತು ಸದರಿ ದೀಪಗಳು ಉರಿಯುತ್ತಿರುವುದುದಿಲ್ಲ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಶ್ರೀ ಎ ಗೀರಿಶ್ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರಿಗೆ ಕೂಡಲೇ ಕ್ರಮವಹಿಸಲು ಸೂಚಿಸಿದರು.

5) ಸಭೆಯಲ್ಲಿ ಹಾಜರಿದ್ದ ಶ್ರೀ ಎನ್.ಲೋಕೇಶ್ ರವರು ಮಾತನಾಡಿ, ಚಿಕ್ಕಾಡುಗೋಡಿಯ ಪಿ.ಜಿಯಲ್ಲಿ ರಾತ್ರಿ 11 ಗಂಟೆಯಾದರೂ ಚಿಮಿಣಿಯಿಂದ ಹೊರಬರುವ ವಿಷಯುಕ್ತ ಹೊಗೆ ಮತ್ತು ಕರ್ಕಶ ಶಬ್ಧದಿಂದ ಅಲ್ಲಿನ ವಾಸವಿರುವ ನಾಗರೀಕರಿಗೆ ನಿದ್ದೆಯಿಲ್ಲದೆ ಮತ್ತು ಪರಿಸರ ಅನೈರ್ಮಲ್ಯದಿಂದ ಆರೋಗ್ಯಹಾಳಾಗುವ ಸಂಭವವಿರುತ್ತದೆ ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು. ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ಸ್ಥಳ ಪರಿಶೀಲಿಸಿ, ಕೂಡಲೇ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

6) ಸಭೆಯಲ್ಲಿ ಹಾಜರಿದ್ದ ಶ್ರೀ.ಬಿ.ಟಿ ಕೃಷ್ಣಮೂರ್ತಿ ಮಾತನಾಡಿ, ಪ್ರೇಮಾಲಯ ಶಾಲೆ ಹತ್ತಿರ ಘನತ್ಯಾಜ್ಯ ಬ್ಲಾಕ್‌ಸ್ಪಾಟ್ ನಿರ್ಮಾಣಗೊಂಡು ರಾತ್ರಿಹೊತ್ತಿನಲ್ಲಿ ಅಲ್ಲಿನ ಜನರು ಕಸ-ತ್ಯಾಜ್ಯವನ್ನು ಹಾಗೆಯೇ ಬಿಸಾಡುತ್ತಿರುವುದು ಕಂಡುಬಂದಿರುತ್ತದೆ ಇದರಿಂದ ಕೂಡಲೇ ಸದರಿ ಬ್ಲಾಕ್ ಸ್ಪಾಟ್‌ನ್ನು ತೆರವುಗೊಳಿಸಿ ಹಾಗೂ ಮಾರ್ಷಲ್‌ನವರು ರಾತ್ರಿಹೊತ್ತು ಕಸ ಬಿಸಾಡುವವರನ್ನು ಗುರುತಿಸಿ ದಂಡವಿಧಿಸಬೇಕೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಸಭೆಗೆ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರುರವರನ್ನು ಉದ್ದೇಶಿಸಿ ಮಾತನಾಡಿ ಕೂಡಲೇ ಮಾರ್ಷಲ್‌ರವರ ಸಹಾಯದಿಂದ ಪರಿಶೀಲಿಸಿ ಕ್ರಮವಹಿಸಲು ಸೂಚಿಸಿದರು.

7) ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಸೆಂಟ ಜಾನ್ಸ್‌ವುಡ್ ಅಪಾಟಮೆಂಟ್ ಹತ್ತಿರ ತಾವರೆಕೆರೆ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಕಲ್ವರ್ಟ್ ನಿರ್ಮಿಸಿದ್ದು, ವಾಹನ ಸಗುಮ ಸಂಚಾರಕ್ಕೆ ರ್‍ಯಾಂಪ್‌ನ್ನು ಅಳವಡಿಸದೇ ಹಾಗೆಯೇ ಬಿಟ್ಟಿದ್ದು, ಇದರಿಂದ ಅರ್ಪಾಟ್‌ಮೆಂಟ್‌ನ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ರಸ್ತೆ ಮೂಲಭೂತ ಸೌಕರ್ಯ ಕೇಂದ್ರ ಕಚೇರಿಯ ಅಭಿಯಂತರರಿಗೆ ತಿಳಿಸಲು ವಾರ್ಡ್ ಅಭಿಯಂತರರವರಿಗೆ ಸೂಚಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಹಾಲಿ ದೇಶವ್ಯಾಪ್ತಿ ಕೋರೋನ ರೋಗಾಣುವಿನ ಹೊಸದಾಗಿ ರೂಪಾಂತರ ತಳಿ ಓಮಿಕ್ರಾನ್ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿದುರವುದರಿಂದ ರೋಗ ಹರಡುವುದನ್ನು ತಡೆಗಟ್ಟಲು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರಿಗೆ ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

ಪ್ರತಿಯನ್ನು:
1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.